# ನಿಮ್ಮೊಡನೆ

## ಅನ್ನ ಇದೆ, ಆದರೆ ಬಡವನಿಗಿಲ್ಲ

ಹಸಿವನ್ನು ತಣಿಸುವುದೇ ಬಡತನ ನಿರ್ಮೂಲನೆಯ ಪ್ರಮುಖ ಹೆಜ್ಜೆ. ವೈಜ್ಞಾನಿಕ ಆವಿಷ್ಕಾರಗಳ ಕಾರಣ ಆಹಾರ ಉತ್ಪಾದನೆ ಏರುಗತಿಯಲ್ಲಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಆದರೆ ಬಡವರ ಸಂಖ್ಯೆಯೂ ಏರುಗತಿಯಲ್ಲಿದೆ; ಅದನ್ನು ಇಳಿಸುವ ಪ್ರಯತ್ನಗಳು ಯಶಸ್ವಿಯಾಗುತ್ತಿಲ್ಲ ಎಂಬ ಆತಂಕಕಾರಿ ಸಂಗತಿ ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಬರುತ್ತಿದೆ. ವಿಶ್ವಮಟ್ಟದಲ್ಲಿ ಬಡತನ ನಿರ್ಮೂಲನ ಪ್ರಯತ್ನಗಳ ಅಂಗವಾಗಿ ನಡೆದಿರುವ ಅಧ್ಯಯನಗಳಲ್ಲಿ ಹಸಿವಿನ ಸೂಚ್ಯಂಕವನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಸೂಚಿಸುವುದು ಈ ಅಧ್ಯಯನಗಳ ಉದ್ದೇಶ. ಈಚೆಗೆ ಪ್ರಕಟವಾದ ಜಾಗತಿಕ ಸೂಚ್ಯಂಕದ ಪ್ರಕಾರ ಭಾರತ ಹಸಿವನ್ನು ಶಮನಗೊಳಿಸುವುದರಲ್ಲಿ ನೆರೆಹೊರೆಯ ಪಾಕಿಸ್ತಾನ, ನೇಪಾಳ, ಶ್ರೀಲಂಕಾಗಳಿಗಿಂತಲೂ ಹಿಂದೆ ಇದೆ. ಜಾಗತಿಕ ಮಟ್ಟದಲ್ಲಿ 67ನೆಯ ಸ್ಥಾನವಂತೆ! ಇದು ಆತಂಕಕಾರಿ ಸಂಗತಿ. ಜನಸಂಖ್ಯೆ, ಕೈಗಾರಿಕೆ ಅಭಿವೃದ್ಧಿ, ಆರ್ಥಿಕತೆ, ವೈಜ್ಞಾನಿಕ ಮುನ್ನಡೆಯಲ್ಲಿ ಈ ದೇಶಗಳಿಗಿಂತ ಮುನ್ನಡೆಯಲ್ಲಿರುವ ಭಾರತ ಬಡತನ ನಿವಾರಣೆಯಲ್ಲಿ ಶೋಚನೀಯ ಸ್ಥಿತಿಯಲ್ಲಿದೆ ಎಂಬುದು ಆಡಳಿತ ವ್ಯವಸ್ಥೆಯ ಲೋಪಕ್ಕೆ ಹಿಡಿದ ಕನ್ನಡಿ. ಇದು ಆಡಳಿತಗಾರರು ನಾಚಿಕೆಪಡಬೇಕಾದ ಸ್ಥಿತಿ.

ಆಹಾರಧಾನ್ಯಗಳ ಸಮರ್ಪಕ ವಿತರಣೆ ಮತ್ತು ಕಡುಬಡವರಿಗೆ ರಿಯಾಯಿತಿ ದರದಲ್ಲಿ ಅವುಗಳ ಪೂರೈಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿದ ಪಡಿತರ ವ್ಯವಸ್ಥೆ ಬ್ರಿಟಿಷರು ಯುದ್ಧಕಾಲದಲ್ಲಿ ಜಾರಿಗೆ ತಂದಿದ್ದ ನಿಯಂತ್ರಣ ಕ್ರಮದ ಸುಧಾರಿತ ರೂಪ. ಬಡವರು ಮಾತ್ರವಲ್ಲದೆ ಮಧ್ಯಮವರ್ಗದವರಿಗೂ ವರದಾನದಂತೆ ಇದ್ದ ಈ ವ್ಯವಸ್ಥೆಗೆ ರಾಜಕೀಯದ ಲೇಪವಾಗುತ್ತಿದ್ದಂತೆ ಅದು ಸಂಪೂರ್ಣ ಹದಗೆಟ್ಟು ಹೋಯಿತು. ಅಧಿಕಾರ ಗಳಿಸುವುದೇ ಹಣ, ಆಸ್ತಿ ಮಾಡಿಕೊಳ್ಳುವುದಕ್ಕೆ ಎಂದುಕೊಂಡ ಜನಪ್ರತಿನಿಧಿಗಳೊಂದಿಗೆ ಭ್ರಷ್ಟ ನೌಕರಶಾಹಿಯೂ ಶಾಮೀಲಾದ ಪರಿಣಾಮ ಪಡಿತರ ವ್ಯವಸ್ಥೆಯೂ ಹಣ ಲೂಟಿ ಮಾಡುವ ಮಾರ್ಗವಾಯಿತು. ಬಡವರಿಗಾಗಿ ವಿತರಿಸಲೆಂದು ಬಿಡುಗಡೆಯಾದ ಆಹಾರ ಧಾನ್ಯಗಳು ಕಳ್ಳಪೇಟೆಯ ದಾರಿ ಹಿಡಿದು ಅಧಿಕಾರಿಗಳು ಮತ್ತು ಮಧ್ಯವರ್ತಿಗಳಿಗೆ ಸುಗ್ಗಿಯಾಯಿತು. ಅವರನ್ನು ರಕ್ಷಿಸುವ ರಾಜಕಾರಣಿಗಳೂ ಈ ಸುಗ್ಗಿಯಲ್ಲಿ ಪಾಲುಪಡೆಯದೆ ಬಿಡಲಿಲ್ಲ. ಎಲ್ಲಿ ಹಣವಿದೆಯೋ ಅಲ್ಲಿ ಕಳ್ಳ ಮಾರ್ಗಗಳನ್ನು ಕಂಡುಕೊಳ್ಳುವುದು ದೇಶದ ಭ್ರಷ್ಟ ನೌಕರಶಾಹಿ ಮತ್ತು ದುಷ್ಟ ಜನಪ್ರತಿನಿಧಿಗಳು ಪರಿಪಾಲಿಸಿಕೊಂಡುಬಂದ ಪದ್ಧತಿ. ಇದರಲ್ಲಿ ವೋಟ್ ಬ್ಯಾಂಕ್ ಸೃಷ್ಟಿಸಿಕೊಳ್ಳುವ ರಾಜಕೀಯ ಲಾಭದ ದೃಷ್ಟಿಯೂ ಸೇರಿಕೊಂಡರೆ ವಾಮಮಾರ್ಗಕ್ಕೆ ಇನ್ನಷ್ಟು ಕೋಡು ಮೂಡಿದಂತೆ. ಎಲ್ಲವನ್ನೂ ನಕಲು ಮಾಡುವವರಿಗೆ ಪಡಿತರ ಚೀಟಿಗಳನ್ನೂ ನಕಲು ಮಾಡುವುದು ಕಷ್ಟವಲ್ಲ. ಸೌಲಭ್ಯ ಸಿಗುತ್ತದೆ ಎಂದರೆ ಶ್ರೀಮಂತರೂ ಬಡವರ ಪಟ್ಟಿಯಲ್ಲಿ ಸ್ಥಾನ ಪಡೆಯುವುದು ಅಪರೂಪವಲ್ಲ. ಅದರ ಪರಿಣಾಮವೇ ಅಪರಿಮಿತ ಸಂಖ್ಯೆಯ ಪಡಿತರ ಚೀಟಿಗಳು. ಈ ದುರಾಸೆಯ ಪ್ರವೃತ್ತಿಗೆ ಕಡಿವಾಣ ಹಾಕಲು ಯಾವ ರಾಜಕೀಯ ಪಕ್ಷಗಳ ಸರ್ಕಾರಗಳಿಗೂ ಸಾಧ್ಯವಾಗಿಲ್ಲ.

ಬಡತನ ನಿರ್ಮೂಲನದ ಪ್ರಯತ್ನ ನಿರಂತರವಾಗಿ ಮುಂದುವರಿಸಬೇಕಾಗಿರುವುದು ದೇಶದ ದುರದೃಷ್ಟ. ಆಡಳಿತ ವ್ಯವಸ್ಥೆ ಎಷ್ಟು ಜಟಿಲವಾಗಿದೆ ಎಂದರೆ ಕೇಂದ್ರ ಸರ್ಕಾರದ ದಾಸ್ತಾನು ಕೋಠಿಗಳಲ್ಲಿ ಲಕ್ಷಾಂತರ ಟನ್ ಆಹಾರ ಧಾನ್ಯ ಕೊಳೆಯುತ್ತ ಬಿದ್ದಿದ್ದರೂ ಅದನ್ನು ಹಸಿವಿನಿಂದ ನರಳುವ ಬಡವರಿಗೆ ಹಂಚಲು ಕಾನೂನು ಪ್ರಕಾರ ಅವಕಾಶವಿಲ್ಲ. ಸುಪ್ರೀಂ ಕೋರ್ಟ್ ಈ ನಿಟ್ಟಿನಲ್ಲಿ ಆದೇಶ ನೀಡಿದರೂ ಅದನ್ನು ಪಾಲಿಸುವುದು ಕಷ್ಟವೆಂಬ ಸ್ಪಷ್ಟನೆ ಕೇಂದ್ರ ಸರ್ಕಾರದಿಂದ ಹೊರಬಿದ್ದ ರಾಜಕೀಯ ಪರಿಸ್ಥಿತಿ. ಸಮಾಜದ ದುರ್ಬಲ ವರ್ಗದವರಿಗೆ ಶೈಶವಾವಸ್ಥೆಯಿಂದಲೇ ಪೌಷ್ಟಿಕ ಆಹಾರ ಸಿಗಬೇಕೆಂಬ ಉದ್ದೇಶದಿಂದ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದೆ. ಹಣವೇನೋ ಖರ್ಚಾಗುತ್ತಿದೆ. ಆದರೆ ಬಡವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ದಾರಿದ್ರ್ಯದ ಪ್ರಮಾಣವೂ ವೃದ್ಧಿಸುತ್ತಿದೆ. ಸಂಪರ್ಕ ವ್ಯವಸ್ಥೆ ಸುಧಾರಣೆ ಆಗಿರುವ ಕಾರಣ ಹಸಿವಿನಿಂದ ಸಾವು ಸಂಭವಿಸುವ ಸಾಧ್ಯತೆಯೇ ಇಲ್ಲವೆಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಸಿದ್ಧಾಂತ ಮಂಡಿಸಿ ವಿಶ್ವಮಾನ್ಯತೆ ಪಡೆದಿದ್ದರೂ ಅವರ ಸಿದ್ಧಾಂತ ದೇಶದಲ್ಲಿಯೇ ಅನುಸರಣಯೋಗ್ಯವಾಗಿಲ್ಲ ಎಂಬುದಕ್ಕೆ ಬಡತನ ಪ್ರಮಾಣ ಹೆಚ್ಚಾಗಿರುವುದೇ ಸಾಕ್ಷಿಯಾಗಿದೆ.

ಆಹಾರ ಉತ್ಪಾದನೆಯಲ್ಲಿ ಸಮೃದ್ಧಿ ಇದೆ. ಆದರೆ ಭ್ರಷ್ಟ, ಕಲುಷಿತ ಆಡಳಿತ ವ್ಯವಸ್ಥೆ ಅದನ್ನು ಅರ್ಹರಿಗೆ ತಲುಪಿಸುವಲ್ಲಿ ವಿಫಲವಾಗಿದೆ. ಇದು ದುರಂತ.

■ ಲಕ್ಷ್ಮಣ ಕೊಡಸೆ

ಬಡತನ ನಿರ್ಮೂಲನದ ಪ್ರಯತ್ನ ನಿರಂತರವಾಗಿ ಮುಂದುವರಿಸಬೇಕಾಗಿರುವುದು ದೇಶದ ದುರದೃಷ್ಟ. ಆಡಳಿತ ವ್ಯವಸ್ಥೆ ಎಷ್ಟು ಜಟಿಲವಾಗಿದೆ ಎಂದರೆ ಕೇಂದ್ರ ಸರ್ಕಾರದ ದಾಸ್ತಾನು ಕೋಠಿಗಳಲ್ಲಿ ಲಕ್ಷಾಂತರ ಟನ್ ಆಹಾರ ಧಾನ್ಯ ಕೊಳೆಯುತ್ತ ಬಿದ್ದಿದ್ದರೂ ಅದನ್ನು ಹಸಿವಿನಿಂದ ನರಳುವ ಬಡವರಿಗೆ ಹಂಚಲು ಕಾನೂನು ಪ್ರಕಾರ ಅವಕಾಶವಿಲ್ಲ.

